**ಓಎಸ್ : 128/2014 ಪಿಡಬ್ಲ್ಯೂ: 1**

**ಸಾಕ್ಷಿಯನ್ನು ದಿಃ 28.02.2019 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ 1 ಮತ್ತು ಪ್ರತಿವಾದಿ ಪರ ಶ್ರೀ ಕೆ ಐ ಬಿ ವಕೀಲರಿಂದಃ

ಚಿಂತಾಮಣಿ ದಿ. 16.11.2018 ರಂದು ಮೃತಪಟ್ಟರು. ಸದರಿ ಚಿಂತಾಮಣಿ ಈ ದಾವೆಯಲ್ಲಾಗಲೀ ಅಥವಾ ಹಿಂದಿನ ದಾವೆಯಲ್ಲಾಗಲೀ ಎಂದು ನ್ಯಾಯಾಲಯಕ್ಕೆ ಖುದ್ದು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸರಿ. ನಿಪಿ 17 ರಲ್ಲಿ ಚಿಂತಾಮಣಿಯವರ ಮೃತಪಟ್ಟ ದಿನಾಂಕ ನಮೂದಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ನನಗೆ ವೈಯುಕ್ತಿಕ ಹಿತಾಸಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಮೃತ ವಾದಿಗಾಗಲೀ ಅಥವಾ ಅವರ ವಾರಸುದಾರರಾಗಲೀ ಯಾವುದೇ ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ವ್ಯವಹಾರ ಆಗುವ ಸಂದರ್ಭದಲ್ಲಿ ಚಿಂತಾಮಣಿ ಅವರ ಹೆಂಡತಿ ಹಾಜರಿದ್ದರು. ವ್ಯವಹಾರದ ಸಂದರ್ಭದಲ್ಲಿ ನಾನು ಖುದ್ದು ಹಾಜರಿಲ್ಲದೇ ಇದ್ದ ಕಾರಣ ಚಿಂತಾಮಣಿ ಅಥವಾ ಅವರ ಹೆಂಡತಿ ಇದ್ದ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ. ವ್ಯವಹಾರ ನಡೆದ ಪತ್ರಕ್ಕೆ ನಾನು ಸಾಕ್ಷಿ ಆಗಿ ಸಹಿ ಮಾಡಿಲ್ಲ . ಚಿಂತಾಮಣಿ ಹೆಂಡತಿ ಮತ್ತು ಮಕ್ಕಳ ಪೈಕಿ ಯಾರೊಬ್ಬರಾದರೂ ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ತೊಂದರೆ ಇಲ್ಲ ಎಂದರೆ ಅವಶ್ಯ ಇದ್ದಲ್ಲಿ ಅವರು ಬರುತ್ತಾರೆ ಎಂದು ಹೇಳುತ್ತೇನೆ. ನಿಪಿ 17 ಮೈಸೂರಿನಲ್ಲಿ ನೋಟರಿ ಮುಂಭಾಗ ಅನುಮೋದಿತವಾಗಿರುತ್ತದೆ ಎಂದರೆ ಸರಿ. ಮೃತ ವಾದಿಯ ಹೆಂಡತಿ ಮತ್ತು ಮಕ್ಕಳಿಗೆ ಹಿತಾಸಕ್ತಿ ಇಲ್ಲದಿದ್ದು ನನ್ನ ವೈಯುಕ್ತಿಕ ನಿಪಿ 17 ನ್ನು ತರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಮೃತ ವಾದಿಯ ವಾರಸುದಾರರು ನನ್ನನ್ನು ತಮ್ಮ ಪರವಾಗಿ ಪ್ರತಿನಿಧಿಸಲು ಅನುಮೋದಿಸಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ಆದರೆ ನಾನು ಅವರ ಪರ ಅರ್ಜಿ ಹಾಕಿರುತ್ತೇನೆ.

ಪಾಟೀ ಸವಾಲುಃ

**2** ನೇ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದು ಸಕಾರಣ ಇಲ್ಲದಿದ್ದು ತಿರಸ್ಕರಿಸಲಾಯಿತು ಃ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ,

ಹೆಚ್ಚುವರಿ ಲಘು ವ್ಯವಹಾರಗಳ ಮತ್ತು ಸಿವಿಲ್
ನ್ಯಾಯಾಧೀಶರು (ಹಿ.ವಿ.), ಮೈಸೂರು